# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-183 ಚಿಕ್ಕಲ್ಲಸಂದ್ರ, ಬೆಂಗಳೂರು

---

ದಿನಾಂಕ : 07-08-2021

ಸಂ: ಸ.ಅ/ವಾ-183/ಪಿ.ಆರ್/06/2021-22

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

ವಿಷಯ:- ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಬಿ12(58)ಪಿಆರ್/35/2020-21 ದಿನಾಕ :21-09-2020 ರವರ ಆದೇಶದಂತೆ ದಿನಾಂಕ :07-08-2021 ರಂದು ವಾರ್ಡ್ ಸಂಖ್ಯೆ-183 ಕೆ.ಇ.ಬಿ ಮುಖ್ಯರಸ್ತೆಯಲ್ಲಿರುವ ಯೋಗ ಕೇಂದ್ರದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

******

ಉಲ್ಲೇಖದಲ್ಲಿನ ಸಭಾ ಸೂಚನಾ ಪತ್ರದ ಅನುಸಾರ ಆದೇಶದ ಅಂಶಗಳನ್ನು ಪಾಲಿಸಲು ವಾರ್ಡ್ ಕಮಿಟಿ ಸಭೆ ನಿಗಧಿಪಡಿಸಿ ದಿನಾಂಕ :07-08-2021 ರಂದು ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ-183 ರವಾದ ಶ್ರೀ ರಾಘವೇಂದ್ರ.ಟಿ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳು, ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಶನ್ ಹಾಗೂ ಸಾರ್ವಜನಿಕರನ್ನು ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರು ಹಾಜರಿರುತ್ತಾರೆ.

ಇದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು :-

1. ವಾರ್ಡ್ ಸಂಖ್ಯೆ-183 ರ ಕೆ.ಇ.ಬಿ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಇರುವ ರಸ್ತೆಯಲ್ಲಿರುವ ಮಳೆ ನೀರು ಚರಂಡಿಯಲ್ಲಿ 300 ಮಿಮೀ ಮತ್ತು 230 ಮಿಮೀ ವ್ಯಾಸದ ಕೊಳವೆಗಳನ್ನು ಅಳವಡಿಸಲು ಬೆಂಗಳೂರು ನೀರು ಸರಬರಾಜು ಮಂಡಳಿಯವರು ಸಭೆಯ ಗಮನಕ್ಕೆ ತಂದಾಗ ಪೈಪ್‌ಲೈನ್ ಅನ್ನು ಮಳೆ ನೀರು ಚರಂಡಿಯಲ್ಲಿ ಅಳವಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ತಿಳಿಸಲಾಯಿತು.

2) ಭುವನೇಶ್ವರಿನಗರ ಉಧ್ಯಾನವನದ ಎದುರು ಇರುವ ಟ್ರಾನ್ಸ್‌ಫಾರ್ಮರ್‌ನ ಮೇಲೆ ಇರುವ ಮರದ ಕೊಂಬೆಗಳನ್ನು ಕತ್ತರಿಸುವಂತೆ ಹಾಗೂ ಭುವನೇಶ್ವರಿನಗರದ ಉಧ್ಯಾನವನದ ಒಳಗೆ ಇರುವ ಮರಗಳಲ್ಲಿ ಒಣಗಿದ ಕೊಂಬೆಗಳು ಇರುವುದಾಗಿ ಸಾರ್ವಜನಿಕರು ದೂರು ನೀಡಿದ್ದರೂ ಸಹ ತಾವು ಇದುವರೆಗೆ ಯಾವುದೇ ಕ್ರಮ ವಹಿಸಿರುವುದಿಲ್ಲವೆಂದು ನೋಡಲ್ ಅಧಿಕಾರಿಯವರು ಸಭೆಗೆ ತಿಳಿಸಿದಾಗ ಸಭೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ತೆರವುಗೊಳಿಸುವುದಾಗಿ ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು.

3) ಭುವನೇಶ್ವರಿನಗರ ಉಧ್ಯಾನವನದಲ್ಲಿ ಕಾಮಗಾರಿ ನಡೆಯುತ್ತಿದ್ದು, ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ಸಾರ್ವಜನಿಕರು ಸಭೆಯಲ್ಲಿ ಕೋರಿದಾಗ, ಸಭೆಯಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಸದರಿ ಕಾಮಗಾರಿಯನ್ನು ಇನ್ನು 15 ದಿನದೊಳಗೆ ಪೂರ್ಣಗೊಳಿಸುವುದಾಗಿ ಸಭೆಗೆ ತಿಳಿಸಿದರು.

Scanned by CamScanner

4) ವಾರ್ಡ್ ಸಂಖ್ಯೆ-183 ರಲ್ಲಿ ಉದ್ಯಾನವನಗಳಲ್ಲಿರುವ ಶೌಚಾಲಯಗಳನ್ನು ಕಾರ್ಯಪಾಲಕ ಅಭಿಯಂತರರು, ಯೋಜನೆ (ದಕ್ಷಿಣ) ರವರಿಂದ ದುರಸ್ಥಿ ಪಡಿಸಲಾಗಿರುವುದಾಗಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ರವರ ಸಭೆಗೆ ತಿಳಿಸಿದರು.

5) ವಾರ್ಡ್ ಸಂಖ್ಯೆ-183 ರ ಪ್ರದೇಶದಲ್ಲಿ ಬೆಸ್ಕಾಂ ಇಲಾಖೆಯಿಂದ 1.50 ಮೀಟರ್ + 1.50 ಮೀಟರ್‌ನಷ್ಟು ಪಿಟ್‌ಗಳನ್ನು ಅಗೆಯುತ್ತಿದ್ದು, ಕೆಲವೊಂದು ಕಡೆಗಳಲ್ಲಿ Linear Cuttings done Roads ಮತ್ತು Horizontal Cuttings ಗಳನ್ನು ಮಾಡಲಾಗಿದ್ದು, ಅವುಗಳನ್ನು ಕೂಡಲೇ ಸರಿಪಡಿಸುವಂತೆ ನೋಡಲ್ ಅಧಿಕಾರಿಯವರು ತಿಳಿಸಿದಾಗ ಬೆಸ್ಕಾಂ ಇಲಾಖೆ ಅಧಿಕಾರಿಗಳು Book Ajustement ರಸ್ತೆ ಕತ್ತರಿಸಿರುವ ಮೊತ್ತವನ್ನು ಪಾಲಿಕೆಗೆ ಸರಿದೂಗಿಸಿರುವುದಾಗಿ ಸಭೆಗೆ ತಿಳಿಸಿರುತ್ತಾರೆ. ಆದ್ದರಿಂದ ನೋಡಲ್ ಅಧಿಕಾರಿಯವರು ಮಾತನಾಡಿ ರಸ್ತೆ ಗುಂಡಿಗಳನ್ನು ಮುಚ್ಚಲು ಅನುವು ಮಾಡಲು ಸಭೆಯಲ್ಲಿ ತಿಳಿಸಿರುತ್ತಾರೆ.

ಮುಂದುವರೆದಂತೆ ಉಲ್ಲೇಖ ಸಂಖ್ಯೆ :ಮು.ಆ/ಪಿಆರ್/I113/2021-22 ದಿನಾಂಕ :26-07-2021 ರಲ್ಲಿ ಮಾನ್ಯ ಮುಖ್ಯ ಆಯುಕ್ತರು 2021-22 ನೇ ಸಾಲಿನ ಆಯುವ್ಯಯದಲ್ಲಿ ನಿರ್ವಹಣೆ ಮತ್ತು ಅಭಿವೃದ್ಧಿ ಹೊಸ ಕಾಮಗಾರಿಗೆ ಪ್ರತಿ ವಾರ್ಡ್‌ಗೆ ಒಟ್ಟು ರೂ.60.00 ಲಕ್ಷಗಳನ್ನು ಮೀಸಲಿರಿಸಲಾಗಿದ್ದು, ಅದರಂತೆ ಕ್ರಿಯಾ ಯೋಜನೆಯಲ್ಲಿ Line Estimate ಮಾಡಿ ವಾರ್ಡ್ ಸಮಿತಿ ಸಭೆಯಲ್ಲಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುವ ಮೇರೆಗೆ ಈ ಕೆಳಕಂಡ ಕಾಮಗಾರಿಗಳಿಗೆ ಪ್ರಸ್ತಾವನೆಯನ್ನು ವಾರ್ಡ್ ಸಮಿತಿ ಸಭೆಯಲ್ಲಿ ಸಲ್ಲಿಸಲಾಯಿತು.

| ಕ್ರಮ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | ರಸ್ತೆ ಮತ್ತು ದುರಸ್ಥಿ ನಿರ್ವಹಣೆ ಕಾಮಗಾರಿ. | 20.00 |
| 2 | ಕೊಳವೆ ಬಾವಿಗಳ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿ. | 20.00 |
| 3 | ರಸ್ತೆ ಗುಂಡಿ ಮುಚ್ಚುವ ಕಾಮಗಾರಿ. | 20.00 |
| 4 | ಬೆಸ್ಕಾಂ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಗೆತದ ದುರಸ್ಥಿ ಕಾಮಗಾರಿ | 20.00 |

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Raghavendra.T
ವಾರ್ಡ್ ಸಮಿತಿ ಸಂಚಾಲಕರು
AE-183

ವಾರ್ಡ್ ಸಮಿತಿ ನೋಡಲ್ ಅಧಿಕಾರಿ

Scanned by CamScanner